



## ಸಂಸಾರದ ನೊಗ

ನಗರ ಪ್ರದೇಶಗಳಲ್ಲಿ ವಾಸಿಸುವವರಿಗೆ ಖರ್ಚು ವೆಚ್ಚ ಅಧಿಕ..! ಪ್ರತಿಯೊಂದಕ್ಕೂ ದುಬಾರಿ ಬೆಲೆ. ಶೈಕ್ಷಣಿಕ ವೆಚ್ಚವಂತೂ ಮಕ್ಕಳ ಸ್ಕೂಲ್ ಬ್ಯಾಗ್‌ನಂತೆ ಮಣಭಾರ. ಒಬ್ಬರ ಸಂಪಾದನೆಯಿಂದ ಮಧ್ಯಮ ತರಗತಿಯ ಕುಟುಂಬ ಬಂಡಿ ತೆವಳುತ್ತಲೇ ಸಾಗುತ್ತದೆ. ಅಂಥದ್ದರಲ್ಲಿ ಮಹಿಳೆಯೂ ಸಂಸಾರ ನೊಗಕ್ಕೆ ಹೆಗಲು ನೀಡಲೇಬೇಕಾಗುತ್ತದೆ.

ಮಹಿಳೆಯ ಕ್ರಿಯೇಟಿವಿಟಿ ಬೆಳಕು ಕಾಣುವುದು ಈ ಸಂದರ್ಭದಲ್ಲೇ! ದುಸ್ತರವಾದ ಯಾಂತ್ರಿಕ ಬದುಕಿಗೆ ಪೂರ್ಣ ವಿರಾಮ ಹಾಕಿ, ಸೃಜನಶೀಲತೆಯ ಪೆಟ್ಟಿಗೆ ತೆರೆದರೆ, ಎಷ್ಟೆಷ್ಟೋ ಆಣಿಮುತ್ತುಗಳು ಸಿಗಬಹುದು!

ಬರುತ್ತಾರೆ. ಬಿಡದಿ ಮನೆ ಅಲಂಕಾರ ಹಾಗೂ ಗೃಹ ಪ್ರವೇಶ ಸಮಾರಂಭಕ್ಕಾಗಿ ಹೊಸ ಮನೆಯ ಸಿಂಗಾರ ಮಾಡುವುದರಲ್ಲಿ ರೂಪಶ್ರೀ ನಿಪುಣರು. ಕುಂದನ್ ರಂಗೋಲಿ, ಗೋಡೆ ಮೇಲೆ ಹಾಕುವ ಪಟಗಳು, ದೇವರನ್ನು ಕೂರಿಸುವ ಪೀಠದ ಅಲಂಕಾರ, ಚಂದ ಚಂದದ ಆರತಿ ತಟ್ಟೆಗಳು, ಅಷ್ಟೇ ಏಕೆ! ಬಾಳೆಕಂದುಗಳನ್ನು ಇಡಲು ಸ್ಟ್ಯಾಂಡ್ ಕೂಡಾ ತಯಾರಿಸುತ್ತಾರೆ.

ರೂಪಶ್ರೀಗೆ ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ. ಹಾಸನದ ಹೆಬ್ಬಾಲೆಯವರಾದ ರೂಪಶ್ರೀ ಲಕ್ಷ್ಮೀನಾರಾಯಣ, ಸುಂದರಮ್ಮ ದಂಪತಿಗಳ ಪುತ್ರಿ. ಇಬ್ಬರೂ ವೃತ್ತಿಯಲ್ಲಿ ಶಿಕ್ಷಕರು. ಬಾಲಕಿ ರೂಪಶ್ರೀ ಶಾಲೆಯ ಮೊದಲ ದಿನವೇ ಮುಖ್ಯೋಪಾಧ್ಯಾಯರ ಕೋರಿಕೆಯಂತೆ, 'ಕುಳಿತು ಊಟ ಮಾಡುವ ಮಹಿಳೆಯ' ಚಿತ್ರ ಬಿಡಿಸಿದ್ದಳು. ಚಂದದ ಚಿತ್ರ ಮುಖ್ಯೋಪಾಧ್ಯಾಯರ ಮನಸೂರೆಗೊಂಡಿತ್ತು. ಪುಟ್ಟ ಹುಡುಗಿ ರೂಪಶ್ರೀಗೆ ಮೆಚ್ಚುಗೆಯ ಮಾತುಗಳ ಜೊತೆ ಬಣ್ಣದ ಪೆನ್ಸಿಲ್ಲುಗಳ ಬಹುಮಾನ!

ಚಿತ್ರಕಲೆಯಲ್ಲಿ ಪ್ರತ್ಯೇಕವಾಗಿ ಶಿಕ್ಷಣ ಪಡೆಯದಿದ್ದರೂ ಸ್ವಯಂ ಪ್ರತಿಭೆಯಿಂದ ಚಿತ್ರ ಬಿಡಿಸುತ್ತಾ ಮೈಮರೆಯುತ್ತಿದ್ದಳು. ಪ್ರತಿ ವರ್ಷ ಬಹುಮಾನಗಳನ್ನು ಪಡೆಯುತ್ತಿದ್ದಳು. ಹತ್ತನೆಯ ತರಗತಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಬಹುಮಾನ ಪಡೆದಿದ್ದಳು. ಸಂಗೀತ ನೃತ್ಯ ತರಗತಿಗೂ ಸೇರಿಕೊಂಡು ನೃತ್ಯದಲ್ಲಿ ಜೂನಿಯರ್ ಹಂತವನ್ನು ಮುಗಿಸಿದ್ದಳು. ಮುಂದೆ ಕಾಲೇಜು ಶಿಕ್ಷಣ ಪಡೆಯುವಾಗ ಎಲ್ಲಾ ಹವ್ಯಾಸಗಳನ್ನು ಹೃದಯದ ಗೂಡಿನಲ್ಲಿ ಭದ್ರವಾಗಿರಿಸಿ, ಕೀಲಿ ಹಾಕುತ್ತಾಳೆ.

ಶಿಕ್ಷಣ ಮುಗಿಸಿ, ಕೆಲ ಸಮಯ ಉದ್ಯೋಗವನ್ನೂ ಮಾಡಿದ್ದಳು. ಮುಂದೆ ದಾವಣಗೆರೆಯ ಹರೀಶರೊಂದಿಗೆ ಮದುವೆಯಾಗಿತ್ತು. ಹರೀಶರು ಪತ್ನಿಯ ಕಲಾಸಕ್ತಿಯನ್ನು ಗಮನಿಸಿ, ವೀಣೆ ಕಲಿಯಲು ಪ್ರೋತ್ಸಾಹಿಸಿದ್ದರು. ರೂಪಶ್ರೀ ಬಹಳ ಖುಷಿಯಿಂದ ವೀಣೆ ಕಲಿಯಲು ಪ್ರಾರಂಭಿಸಿದರೂ ಮಕ್ಕಳು ಹುಟ್ಟಿದ ನಂತರ ಕಲಿಕೆಗೆ ಬ್ರೇಕ್ ಬಿತ್ತು. ಮಕ್ಕಳೇ ಪ್ರಪಂಚವಾದರು.. ಮಕ್ಕಳೀಗ ಬೆಳೆಯುತ್ತಿದ್ದಾರೆ, ತಮ್ಮ ಕೆಲಸ ತಾವೇ ಮಾಡಿಕೊಳ್ಳಬಲ್ಲರು. ಆದುದರಿಂದ ರೂಪಶ್ರೀಯವರ ಹವ್ಯಾಸಗಳು ಮತ್ತೊಮ್ಮೆ ಮೈಕೊಡವಿ ನಿಂತು, ಮತ್ತಷ್ಟು ಮೆರುಗನ್ನು ಪಡೆದಿವೆ.. ಚಿತ್ರಕಲೆಯಲ್ಲಿದ್ದ ಆಸಕ್ತಿಯು ಇತರ ಹವ್ಯಾಸಗಳಿಗೆ ಪೂರಕವಾಗಿದೆ.

